ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 850/2014

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಧನಂಜಯ | ದಿನಾಂಕಃ 03.10.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಹೆಚ್. ಮಹದೇವಪ್ಪ | |
| ವಯಸ್ಸು | : | 65 ವರ್ಷ | |
| ಉದ್ಯೋಗ | : | ವ್ಯವಸಾಯ | **CW-3** |
| ವಾಸಸ್ಥಳ | : | ಹೆಗ್ಗವಾಡಿ ಗ್ರಾಮ | **PW-5** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಮೃತ ಅಪ್ಪಾಜಿಯವರು ನನ್ನ ಅಣ್ಣ. ಚಾಸಾ 1, 2, 4 ರಿಂದ 6 ರವರ ಪರಿಚಯ ಇಲ್ಲ. ಮೃತ ಅಪ್ಪಾಜಿಯವರು ಈಗ್ಗೆ 08.02.2014 ರಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡು ನಂತರ ಚಿಕಿತ್ಸೆ ಫಲಿಸದೇ ಚಾಮರಾಜನಗರ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ದಿಃ 09.02.2014 ಮೃತರಾಗಿರುತ್ತಾರೆ. ನಮ್ಮ ಅಣ್ಣ ಮೃತರಾದ ಬಗ್ಗೆ ನಾನು ಪೋಲೀಸರಿಗೆ ದೂರು ನೀಡಿರುತ್ತೇನೆ.

ಸಾಕ್ಷಿ ದಿಃ09.02.2014 ರ ದೂರನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿಃ 6 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ6(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಜಿ ಎಸ್ ಕೆ ವಕೀಲರಿಂದಃ

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ **6** ದೂರನ್ನು ನಾನೇ ಹೇಳಿ ಬರೆಸಿದ್ದು ಯಾರು ಬರೆದಿದ್ದಾರೆ ಎಂಬುದು ನೆನಪಿಲ್ಲ. ಅಪಘಾತ ಯಾರು ಮಾಡಿದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪರಿಹಾರ ಪಡೆದುಕೊಳ್ಳಲು ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಪಟ್ಟ ವಾಹನಗಳ ನೋಂದಣಿ ಸಂಖ್ಯೆ ಈಗ ನನಗೆ ಹೇಳಲು ಆಗುವುದಿಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.